# ಚಿತ್ರಗೀತೆಯ ಹಾಡುಪಾಡು...

ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ಬದಲಾವಣೆಯೊಂದೇ ಶಾಶ್ವತ ಎಂಬ ಮಾತು ಚಲನಚಿತ್ರ ರಂಗಕ್ಕೆ ಕೂಡ ಅನ್ವಯಿಸದೆ ಇರುವುದಿಲ್ಲ. ಚಿತ್ರದ ವಸ್ತು, ವಿಷಯ, ದೃಷ್ಟಿಕೋನ, ತಾಂತ್ರಿಕತೆ ಸೇರಿ ಪ್ರತಿಯೊಂದೂ ಕಾಲಘಟ್ಟಗಳಲ್ಲಿ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತದೆ. 'ಕಾಲವನ್ನು ತಡೆಯೋರು ಯಾರೂ ಇಲ್ಲ' ಎಂಬ ಹಾಡಿನ ಸಾಲು ಹಾಗೆಯೇ ಬದಲಾವಣೆಯನ್ನು ತಡೆಯೋರು ಯಾರೂ ಇಲ್ಲ ಎಂಬ ಮಾತು – ಎಲ್ಲವೂ ಸತ್ಯ.

ಬದಲಾವಣೆ ಎನ್ನುವುದು ಸಾಪೇಕ್ಷವಾದದ್ದು, ಅದರ ಗುಣಮಟ್ಟದ ನಿರೀಕ್ಷೆ ಮತ್ತು ನಿಷ್ಕರ್ಷೆಗಳಂತೂ ಇನ್ನೂ ಸಾಪೇಕ್ಷವಾದದ್ದು ಎನ್ನುವುದೂ ಅಷ್ಟೇ ಸತ್ಯ. ಅದಕ್ಕೆ ಸಾರ್ವತ್ರಿಕ ಮಾನದಂಡಗಳನ್ನು ನಿಗದಿ ಮಾಡು ಸಾಧ್ಯವಿಲ್ಲ. ಇವೆಲ್ಲವನ್ನೂ ಒಪ್ಪಿಕೊಳ್ಳುತ್ತಲೇ, ಕಳೆದ ಹತ್ತು ವರ್ಷಗಳ ಚಿತ್ರಗೀತೆಗಳತ್ತ ಕಣ್ಣು ಹಾಯಿಸಿದರೆ ಅಥವಾ ಸುಮ್ಮನೆ ಕೇಳಿಸಿಕೊಂಡರೆ ಗುಣಮಟ್ಟ ಪಾತಾಳದತ್ತತ್ತ ಕುಸಿಯುತ್ತಿರುವುದು ಥಟ್ಟನೆ ತಿಳಿಯುತ್ತದೆ. ಕೆಲವು ಚಿತ್ರಗಳಲ್ಲಿ ಕವಿಗಳ ಅಥವಾ ಚಿತ್ರರಂಗ ಕರೆಯುವಂತೆ 'ಗೀತರಚನಕಾರರ' ಒಂದಿಷ್ಟು ಒಳ್ಳೆಯ ಕವಿತೆಗಳ ಮಳೆಹನಿಗಳ ಸಿಂಚನ ಬಿಟ್ಟರೆ ಮಿಕ್ಕಂತೆ ಬಹುಪಾಲು ಚಿತ್ರಗೀತೆಗಳು ಮಾತು ಮತ್ತು ಮಾಧುರ್ಯ ಎರಡರಲ್ಲೂ ಬರೀ ಬರಡು. ಅಂದಿನಿಂದ ಇಂದಿನವರೆಗೂ ಚಿತ್ರಗೀತೆಗಳ ಉದ್ದೇಶವೇನೂ ಬದಲಾಗಿಲ್ಲ, ಬದಲಾಗಿರುವುದು ಅದರ ಗುಣಲಕ್ಷಣಗಳಷ್ಟೆ; ಪ್ರೀತಿಪ್ರೇಮವನ್ನು ಹರಿಸಲಿ, ನಾಯಕನನ್ನು ಮೆರೆಸಲಿ, ನಾಯಕಿಯನ್ನು ಬಣ್ಣಿಸಲಿ ಅದಕ್ಕೊಂದು ಸೊಗಸು ಬೇಡವೇ?


ವಿಲ್ಸನ್ ಡಿಸೋಜಾ

ಜೊತೆಗೆ ಇಂದಿನ ಕೆಲವು ಚಿತ್ರಗೀತೆಗಳು ಸಾರುವ ಸಂದೇಶಗಳಂತೂ ಘನಘೋರ. ಹೆಣ್ಣು ಎಂದಿನಂತೆ ಒಂದು ಸರಕು. ಹುಡುಗಿ ಪ್ರೀತಿಸಲು ಒಪ್ಪದಿದ್ದರೆ ಆ್ಯಸಿಡ್ ಹಾಕುವ ಬೆದರಿಕೆ ಸೇರಿದಂತೆ ಸಂಬಂಧಗಳ ವಿಚಾರ ಹೇಳುವುದೇ ಬೇಡ. ಇತ್ತ ಕನ್ನಡವೂ ಅಲ್ಲದ ಅತ್ತ ಇಂಗ್ಲಿಷೂ ಅಲ್ಲದ 'ಕಂಗ್ಲಿಷ್' ಪದಗಳು ತುಂಬಿದ ಚಿತ್ರಗೀತೆಗಳನ್ನು ಕೇಳುವ ಯೋಗ ಕನ್ನಡಿಗರದು. ಕಾಲಕ್ಕೆ ತಕ್ಕಂತೆ ಕೆಟ್ಟದ್ದನ್ನು ಕೊಡುವುದಲ್ಲದೆ 'ಜನ ಮೆಚ್ಚುವುದನ್ನು ನಾವು ಕೊಡುತ್ತೇವೆ' ಎಂಬ ಸಮರ್ಥನೆಯೂ ಇದ್ದೇ ಇರುತ್ತದೆ. ಚಲನಚಿತ್ರ ರಂಗದ ಗೀತವೂ ಸಂಗೀತವೂ ಕಾಲದ ಬಾಲ ಹಿಡಿದೇ ನಡೆಯುತ್ತಿವೆ ಎನ್ನುವುದನ್ನು ಒಪ್ಪೋಣ. ಆದರೆ ಎಂಥ ಕೆಸರಿನಲ್ಲೂ ಸುಂದರ ಕಮಲಗಳು ಅರಳುತ್ತವೆ ಎಂಬುದನ್ನು ಹೇಗೆ ಮರೆಯೋಣ?

**–ಆರ್. ಪೂರ್ಣಿಮಾ**